# 6

# ಯೇಸುವನ್ನು ಲಕ್ಷ್ಯವಿಟ್ಟು ಯೋಚಿಸಿರಿ (3:1-14)

ಇಬ್ರಿಯ 3:1ರಲ್ಲಿ, "ಆದ್ದರಿಂದ" ಎಂದು ಪ್ರಾರಂಭಿಸಲಾಗಿದೆ, ಆದ್ದರಿಂದ ಎಂಬ ಪದವು ಹಿಂದಿನ ವಾಕ್ಯಭಾಗಕ್ಕೆ[1] ಸಂಬಂಧಿಸಿರುವದರಿಂದ, ಯೇಸುವನ್ನು ಲಕ್ಷ್ಯವಿಟ್ಟು ಯೋಚಿಸಿರಿ (ವಚನ 1). ಇಬ್ರಿಯ ಪತ್ರಿಕೆಯ ಓದುಗರು ತಮಗೆ ಅರಿವಿಲ್ಲದೆ, ಯೇಸುವನ್ನು ಕಳಂಕಕ್ಕೆ ಈಡು ಮಾಡಿದ್ದರು. ಒಂದು ವೇಳೆ ಅವರು ಧರ್ಮಶಾಸ್ತ್ರಕ್ಕೆ ಹಿಂದಿರುಗಿದ್ದರೆ, ಮೋಶೆಗೆ ಹಿಂದಿರುಗಿದ್ದರೆ ಅವರು ಹಿಂಜರಿದು ಹೋಗಿದ್ದರೆ - ಇಂತಹ ಕಾರಣಗಳು ಅವರು ಯೇಸುವನ್ನು ನಿರ್ಲಕ್ಷ ಮಾಡಿದರು ಎಂಬ ಸೂಚನೆಗಳಾಗಿವೆ.

ಆದ್ದರಿಂದ, ಅವನ ಓದುಗರು ಯೇಸುವನ್ನು ಲಕ್ಷ್ಯವಿಟ್ಟು ಯೋಚಿಸಬೇಕೆಂದು ಬರೆದನು.[2] ಅಂದರೆ ಆತನನ್ನು ಸ್ಪಷ್ಟವಾಗಿ ತಿಳಿದುಕೋ ಎಂಬದೆ. ಇದನ್ನು ಮಾಡುವದರಿಂದ, ಅವರು ನಂಬಿಗಸ್ತರಾಗಿ ಸಾಗಲು ಪ್ರೋತ್ಸಾಹ ಉಂಟಾಗುತ್ತಿತ್ತು.

## ನಂಬಿಗಸ್ತನಾದ ಯೇಸುವನ್ನು ಲಕ್ಷ್ಯವಿಟ್ಟು ಗಮನಿಸಿರಿ (3:1-6ಎ)

ಇಬ್ರಿಯ ಪತ್ರಿಕೆ ಹಾಗೂ ನಮ್ಮ ಪಾಠದಲ್ಲಿ "*ನಂಬಿಗಸ್ತನಾದ* ಕರ್ತನ" ವಿಷಯವನ್ನೇ ಪ್ರಸ್ತಾಪಿಸಲಾಗಿದೆ (ವಚನಗಳು 2, 6). ಅದರ ಕುರಿತ ಅನೇಕ ಉದಾಹರಣೆಗಳನ್ನು ಇಲ್ಲಿ ನೀಡಲಾಗಿದೆ.

### ನಂಬಿಗಸ್ತಿಕೆಯಿಂದ ನಮ್ಮನ್ನು ಸಹೋದರರು ಎಂದು ಕರೆದಿರುವನು (3:1ಎ)

(ಪರಿಶುದ್ಧರಾದವರನ್ನು "ಸಹೋದರರು" ಎಂದು ಕರೆಯುವಲ್ಲಿ ಆತನು ನಾಚಿಕೆಪಡುವನಲ್ಲ 2:11; ನೋಡಿರಿ ವಚನ 17). ಆದ್ದರಿಂದ ದೇವಜನರಾದ ಸಹೋದರರೇ (3:1ಎ) ಎಂದು ಆರಂಭವಾಗದೆ. ನಾವು ಯೇಸುವಿನ ಸಹೋದರರಾಗಿ ರುವದರಿಂದ,[3] ಪರಲೋಕಕ್ಕೆ ಕರೆಯಲ್ಪಟ್ಟು ಪಾಲುದಾರರಾಗಿದ್ದೇವೆ (ವಚನ 1ಎ) - ಇದು ಇಸ್ರಾಯೇಲ್ಯರ ಅರಣ್ಯದ ಕರೆಗೆ ತದ್ವಿರುದ್ಧವಾಗಿದೆ.

### ಅಪೊಸ್ತಲ ಹಾಗೂ ಯಾಜಕನಂತೆ ನಂಬಿಗಸ್ತನು (3:1ಎ, 2ಎ)

ಯೇಸುವನ್ನು "ಅಪೊಸ್ತಲನು ಹಾಗೂ ಮಹಾಯಾಜಕನು" ಎಂದು ವ್ಯಾಖ್ಯಾನಿಸಲಾಗಿದೆ. "ಅಪೊಸ್ತಲ" ಎಂದರೆ "ಕಳುಹಿಸಲ್ಪಟ್ಟವನು" ಮನುಷ್ಯರಿಗಾಗಿ ದೇವರು ಯೇಸುವನ್ನು ಕಳುಹಿಸಿಕೊಟ್ಟನು (ನೋಡಿರಿ ಮತ್ತಾಯ 10:40; ಮಾರ್ಕ 9:37; ಯೋಹಾನ 5:36). ಮನುಷ್ಯರ ಬಳಿಗೆ ಬರುವದು ಯೇಸುವಿನ ಒಂದು ಭಾಗದ ಕೆಲಸವಾಗಿತ್ತು, ಹೇಗೂ, ಆತನು ಮಹಾಯಾಜಕನೂ ಆದನು. ಧರ್ಮಶಾಸ್ತ್ರದ ಪ್ರಕಾರ ಮಹಾಯಾಜಕನು ಜನರ ಪರವಾಗಿ ದೇವರಲ್ಲಿ ಕಾರ್ಯ ನಿರ್ವಹಿಸಿದ್ದರಿಂದ ಮನುಷ್ಯನು ದೇವರನ್ನು ಸಂಧಿಸುವ ಸಾಧ್ಯತೆಯಿತ್ತು. ಆದ್ದರಿಂದ ಮನುಷ್ಯರಿಂದ ದೇವರ ಬಳಿಗೆಹೋಗುವದು ಸಹ ಯೇಸುವಿನ ಕೆಲಸದ ಮತ್ತೊಂದು ಭಾಗವಾಗಿತ್ತು (1 ತಿಮೊಥೆ 2:5). ಈ ಎರಡು ಕ್ರಿಯೆಗಳನ್ನು, ಬ್ರೆವರ್‌ರವರ ವಿವರಿಸಿ: "ಒಬ್ಬ ಪ್ರವಾದಿಯು ದೇವ ಪ್ರತಿನಿದಿಯಾಗಿ ಮನುಷ್ಯರೊಂದಿಗೆ ಮಾತನಾಡುವನು ... ಒಬ್ಬ ಯಾಕನಾಗಿ, ಜನರ ಪ್ರತಿನಿದಿಯಾಗಿ ದೇವರೊಂದಿಗೆ ಮಾತನಾಡುವನು."[4]

ಯೇಸು ಅಪೊಸ್ತಲನಾಗಿ ಹಾಗೂ ಯಾಜಕನಾಗಿ, ಈ ಎರಡು ಕೆಲಸಗಳನ್ನು *ನಂಬಿಕೆಯಿಂದ* ಮಾಡಿದನು (ವಚನ 2ಎ; ಒತ್ತಿ ಹೇಳಿದ್ದು ನನ್ನದು). ಆತನನ್ನು ಯಾವ ಉದ್ದೇಶಕ್ಕಾಗಿ ದೇವರು ನೇಮಿಸಿದ್ದನೋ, ಅದನ್ನು ನಂಬಿಗಸ್ತಿಕೆಯಿಂದ ನೆರವೇರಿಸಿದನು (ಯೋಹಾನ 4:34; 5:30; 6:38).

**ಯಥಾರ್ಥವುಳ್ಳ ಕಟ್ಟಡ ನಿರ್ಮಿಸುವವನಂತೆ ಹಾಗೂ ಯಜಮಾನನಂತೆ,**

**ದೇವರ ಮನೆಯಲ್ಲಿದ್ದನು (3:2ಬಿ-6ಎ).**

ಯೇಸು ಮಾಡಿದ ಲೋಕದ ಸೇವೆಯನ್ನು ವಿವಿಧವಾಗಿ ವಿವರಿಸಬಹುದು (ಲೂಕ 4:43; 19:10). ಆತನು ದೇವರ ಮನೆಯನ್ನು ಕಟ್ಟಿದ ವಿಚಾರವನ್ನು ನಮ್ಮ ಪಾಠದಲ್ಲಿ ವಿವರಿಸಲಾಗಿದೆ (ವಚನಗಳು 3, 4, 6).

ನಂಬಿಗಸ್ತಿಕೆಯಲ್ಲಿ, ಯೇಸು "ಸರ್ವಶ್ರೇಷ್ಟನು" ಎನ್ನಲ್ಲಾಗಿದೆ. ಅಂದರೆ ಆತನು ಮೋಶೆ ಗಿಂತ ಶ್ರೇಷ್ಟನು. ಮೋಶೆಗಿಂತಲೂ ದೊಡ್ಡವನು ಇರಲಿಲ್ಲ ಎಂದು ಯೆಹೂದ್ಯರು ತಿಳಿದಿದ್ದರು. ಹಾಗೂ *ಮೋಶೆಯು* ದೇವದೂತರಿಗಿಂತ ಶ್ರೇಷ್ಟನು ಎಂದೂ ತಿಳಿದಿದ್ದರು. ಇಬ್ರಿಯ ಬರಹಗಾರನ ಮುಂದಿನ ವಾದವೇನೆಂದರೆ: ಯೇಸು ದೂತರಿಗಿಂತ ಶ್ರೇಷ್ಟನು ಎಂದು ಈಗಾಗಲೇ ತಿಳಿಸಿ; ದೂತರಿಗಿಂತಲೂ ದೊಡ್ಡವನೆಂದು ಯಾರನ್ನು ಯೆಹೂದ್ಯರು ತಿಳಿದಿದ್ದರೋ ಅವನಿಗಿಂತಲು ಯೇಸು ದೊಡ್ಡವನು ಎಂದಿರುವನು.[5]

ಯೇಸುವಿಗೂ ಹಾಗೂ ಮೋಶೆಗೂ ನಡುವೆ ಒಂದ ಗೆರೆಯನ್ನು ಬರಹಗಾರನು ಹಾಕಿರುವನು:

- ಯೇಸು ಕಟ್ಟಡ ಕಟ್ಟುವವನಾದರೆ, ಮೋಶೆ ಅದರಲ್ಲಿ ಒಂದು ಭಾಗವಷ್ಟೆ (ವಚನಗಳು 3, 4).
- ಯೇಸು ಮಗನಾದರೆ, ಮೋಶೆ ಸೇವಕನು (ವಚನಗಳು 5, 6).

**ನಮ್ಮನ್ನು ತನ್ನವರೆಂದು ಅಂಗೀಕರಿಸುವದರಲ್ಲಿ ನಂಬಿಗಸ್ತನು (3:6ಎ)**

ವಚನ 6 ಹೇಳುವಂತೆ, "ಕ್ರಿಸ್ತನಾದರೋ ಮಗನಾಗಿ ದೇವರ ಮನೆಯ ಮೇಲೆ ಅಧಿಕಾರಿ ಯಾಗಿರುವದರಿಂದ - *ನಾವು ಯಾರ ಮನೆಯವರು*" (ವಚನ 6ಎ; ಒತ್ತಿ ಹೇಳಿದ್ದು ನನ್ನದು). ಮತ್ತಾಯ 16ರಲ್ಲಿ, ನನ್ನ ಸಭೆಯನ್ನು ಕಟ್ಟುವನು ಎಂದು ಯೇಸು ಹೇಳಿರುವನು (ವಚನ 18), 1 ತಿಮೊಥೆ 3:15ರಲ್ಲಿ, ಸಭೆಯು ದೇವರ ಮನೆಯಾಗಿದೆ. ನಾವು ಆತನಿಗೆ ಸೇರಿದವರು, ಆತನು ನಮ್ಮಲ್ಲಿ ವಾಸಿಸುತ್ತಾನೆ (ಎಫೆಸ 2:21, 22). ಎಂಥಾ ಒಂದು ಅವಕಾಶ, ಎಂಥಾ ಒಂದು ಗೌರವ!

## ಯೇಸುವನ್ನು ಗಮನವಿಟ್ಟು ಲಕ್ಷಿಸಿದ ನಂತರ, ನೀವುಗಳು ನಂಬಿಗಸ್ತರಾಗಿರಿ (3:6ಬಿ-14)

ಬರಹಗಾರನು ಪ್ರಾಯೋಗಿಕವಾದ ಸಂಗತಿಗಳನ್ನೇ ತಿಳಿಸಿರುವನು. ಯೇಸುವಿನ ನಂಬಿಗಸ್ತಿಕೆಯನ್ನು ಚರ್ಚಿಸಿದ ನಂತರ, ತನ್ನ ಓದುಗರು ಸಹ ನಂಬಿಗಸ್ತರಾಗಿರಾಗಿರ ಬೇಕೆಂದು ಎಚ್ಚರಿಸಿರುವನು.

**ಕೇವಲ ದೇವರ ಮನೆಯವರಾಗಿದ್ದರೆ, ಸಾಲದು**

ವಚನ 6 ಹಾಗೂ 14ರ ಒಂದು ವೇಳೆ ಎಂಬ ಪದವನ್ನು ಗಮನಿಸಿರಿ. ಇಸ್ರಾಯೇಲ್ಯರು

ದೇವ ಜನರಾಗಿದ್ದರೂ, ಅದನ್ನು ಧೃಡವಾಗಿ ಹಿಡಿದವರಾಗಿರಲಿಲ್ಲ. ವಚನ 7 ರಿಂದ 11 ಹಾಗೂ ಕೀರ್ತನೆ 95ನ್ನು ಉಲ್ಲೇಖಿಸಿ, ಇಸ್ರಾಯೇಲ್ಯರ ಅಪನಂಬಿಗಸ್ಥಿಗೆಯ ಬಗ್ಗೆ ಬರೆದಿರುವನು. ಸಹಜವಾಗಿ, ಮುಖ್ಯ ನಾಯಕರುಗಳು ಯಶಸ್ವಿಯ ಖಾತ್ರಿಯನ್ನು ನೀಡಲಾರರು. ಹೌದು ಮೋಶೆ ಒಬ್ಬ ದೊಡ್ಡ ನಾಯಕನಾಗಿದ್ದರೂ; ಈ ದಿನಗಳಲ್ಲಿ ಯೇಸು ಅವನಿಗಿಂತ ದೊಡ್ಡವನೇ. ಅದೇ ರೀತಿಯಲ್ಲಿ ಆತನನ್ನು ಅನುಸರಿಸುವ ದೊಡ್ಡವರೂ ಇರಬೇಕು.

**ನಾವು, "ಧೃಢವಾಗಿ ಹೇಗೆ ಹಿಡಿಯಬಹುದು"**


ನಂಬಿಗಸ್ತರಾಗಿರುವ ಕುರಿತು ನಮ್ಮ ಪಾಠದಲ್ಲಿ ಅನೇಕ ಸಲಹೆಗಳನ್ನು ನೀಡಲಾಗಿದೆ.

(1) *ಎಡವಿ ಬೀಳಲು ಸಾಧ್ಯ ಎಂದು ಅರಿಯಬೇಕು.* "ಒಂದು ವೇಳೆ" (ವಚನಗಳು 6, 14) ಎಂಬ ಪದದಲ್ಲಿ, ನಿಯಮದ ಪಾಲನೆಯಿದೆ, ಇಸ್ರಾಯೇಲ್ಯರು ಬಿದ್ದು ಹೋದಂತೆ, ನಾವುಗಳು ಸಹ ಬಿದ್ದು ಹೋಗುವ ಸಾಧ್ಯತೆಗಳಿವೆ. ಅವುಗಳು ಸಂಭವಿಸದಂತೆ ಎಚ್ಚರವಿರಬೇಕು.

(2) *ನಿರೀಕ್ಷೆಯನ್ನು ಧೃಢವಾಗಿ ಹಿಡಿದುಕೊಳ್ಳಬೇಕು* (ವಚನ 6). "ನಿರೀಕ್ಷೆ" ಎಂಬದು ಪ್ರಮುಖ ಪದವಾಗಿದೆ (6:11, 18, 19; 7:19; 10:23). ನಮ್ಮ ದಿನ ನಿತ್ಯದ ಉಳಿವಿಕೆಗಾಗಿ, ನಿರೀಕ್ಷೆಯ ಅಗತ್ಯವಿದೆ.

(3) *"ಅಂತ್ಯದವರೆಗೂ" ನಂಬಿಗಸ್ತರಾಗಿರುವಂತೆ ಪ್ರಯಾಸಪಡಿಸಿ* (ವಚನಗಳು 6, 14).

(4) ಹೃದಯಗಳು ಕಠಿಣವಾಗದಂತೆ ಜಾಗರೂಕರಾಗಿರ್ರಿ (ವಚನಗಳು 8, 13). ಪಾಪದ ನಿಮಿತ್ತ ಕಠಿಣತೆ ಉಂಟಾಗುತ್ತದೆ, ಅದರಿಂದ ಅಪನಂಬಿಕೆ ಉಂಟಾಗಿ, ಭ್ರಷ್ಟತೆಯಾಗುತ್ತದೆ.




(5) *ಆತ್ಮೀಕವಾಗಿ ಜಾಗರೂಕರಾಗಿರ್ರಿ* ("ಚಿಂತನೆ ಮಾಡಿರಿ," ವಚನ 12).

(6) *ಸರಿಯಾದ ಕಾರ್ಯಗಳನ್ನು ಮಾಡುವಂತೆ ಮತ್ತು ನಂಬಿಗಸ್ತರಾಗಿರುವಂತೆ ಒಬ್ಬೊರನ್ನೊಬ್ಬರು ಎಚ್ಚರಿಸಿಕೊಳ್ಳಿ* (ವಚನ 13). "*ಒಬ್ಬೊರನ್ನೊಬ್ಬರು*" ಎಂಬ ಪದಪ್ರಯೋಗದ ಇಬ್ರಿಯ ಪತ್ರಿಕೆಯಲ್ಲಿನ ಬಳಕೆಯಲ್ಲಿ ಇದೊಂದಾಗಿದೆ (ನೋಡಿ 10:24, 25).

(7) *"ಈಹೊತ್ತು" ಎಂಬುದೇ ನಮಗಿರುವ ಎಲ್ಲಾ ಸಮಯವಾಗಿದೆ ಎಂಬುದನ್ನು ಅರಿಯಬೇಕು* (ವಚನಗಳು 7, 13). ನೀವು ಮಾಡುವುದು ಏನಾದರು ಇದ್ದರೇ, ಅದನ್ನು ಈ ಹೊತ್ತೆ ಮಾಡಿ. ಅದನ್ನು ಮುಂದಕ್ಕೆ ತಳ್ಳಾಕಬೇಡಿ!

## ಬೋಧಕರಿಗಾಗಿ ಟಿಪ್ಪಣಿ

3:7 ರಲ್ಲಿ ಇಬ್ರಿಯ ಪತ್ರಿಕೆಯಲ್ಲಿನ ಎರಡನೇ ಎಚ್ಚರಿಕೆಯನ್ನು ನೀಡಲಾಗಿದೆ (ಮುಖ್ಯಾಂಶಗಳನ್ನು ನೋಡಿರಿ). "ಗತಿಸಿಹೋದವುಗಳಿಂದ ಎಚ್ಚರಿಕೆಯ ಪಾಠದಲ್ಲಿ" ಈ ವಿಷಯವನ್ನು ಮುಂದುವರೆಸಲಾಗಿದೆ. ಅದರಲ್ಲಿ ಪ್ರಾಯೋಗಿಕವಾದ ಪಾಠವನ್ನು ನೀಡಲಾಗಿದೆ. ಈ ಪಾಠದಲ್ಲಿ ಬೋಧಿಸುವಾಗ, 3:7-14, ಅಧ್ಯಾಯ 4ರ ಸಂಗಡ ಚರ್ಚಿಸುವದನ್ನು ಮರೆಯಬೇಡಿರಿ.

---

ಟಿಪ್ಪಣಿಗಳು

[1]ಹಿಂದಿನ ಪಾಠವನ್ನು ನೆನಪಿಸಿರಿ. [2]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 123. [3]ಸಹೋದರ ಹಾಗೂ ಸಹೋದರಿಯರನ್ನು ಕುರಿತು "ಸಹೋದರರು" ಎನ್ನಲಾಗಿದೆ. [4]G. C. Brewer, *Brewer's Sermons: Christ Crucified* (Nashville: B. C. Goodpasture, 1952), 121. [5]This paragraph was adapted from William Barclay, *The Letter to the Hebrews* 3d ed., rev. and updated, The New Daily Study Bible (Louisville: Westminster John Knox Press, 2002), 35.